**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.**232-2021 **ಡಿ. ಡಬ್ಲುಃ** 1

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗರಾಜು<br>ಹಗಿನವಾಳು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 31-01-2025. |

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಂ.ಆರ್.ಎಸ್ ವಕೀಲರಿಂದಃ</u>**

ನಾನು ಎಸ್.ಎಸ್.ಎಲ್ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯವರು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಆದರೆ ಸಹಿ ಮಾಡುತ್ತಾರೆ. ನನ್ನ ತಂದೆಯವರು ಇಂಗ್ಲೀಷ್ ನಲ್ಲಿ ಸಹ ಸಹಿ ಮಾಡುತ್ತಾರೆ, ನಾನೇ ಸಹಿ ಮಾಡಲು ಕಲುಹಿಸಿಕೊಟ್ಟಿರುತ್ತೇನೆ. ನನ್ನ ತಂದೆಯವರು ವಿದ್ಯಾವಂತರಾಗಿದ್ದು, ಅವರಿಗೆ ಓದಲು ಬರೆಯವುದು ಬಂದರೂ ಸಹ ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯ ವಿಧ್ಯಮಾನಗಳನ್ನು ತಿಳಿದು ಕೊಂಡಿರುತ್ತೇನೆ. ನಿಡಿ-7 ಕ್ರಯ ಪತ್ರವು ದಿ.29-03-1973 ರಂದು ಆಗಿರುತ್ತದೆ ಎಂದರೆ ಸರಿ. ನಾನು ಜನಿಸುವ ಪೂರ್ವದಲ್ಲಿಯೇ ಸದರಿ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿ. ಆಗಾಗಿ ಕ್ರಯಪತ್ರದ ವಿಚಾರವಾಗಿ ನನ್ನ ತಂದೆಯವರು ಹೇಳಿದ್ದನ್ನು ಹೊರತುಪಡಿಸಿ ನನಗೆ ಖುದ್ದು ಮಾಹಿತಿ ಇರುವುದಿಲ್ಲ

ಎಂದರೆ ಸರಿ. ನಿಡಿ–7 ಕ್ರಯ ಪತ್ರದಲ್ಲಿ ಸ್ವತ್ತಿನ ವಿಸ್ತೀರ್ಣವನ್ನು ಗಜಗಳಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ವ್ಯವಸಾಯ ಜಮೀನು ಎಂದರೆ ಸರಿ. ದಾವಾ ಷೆಡ್ಯೂಲ್ ಸರ್ವೇ ನಂ.126/1 ರ ವಿಸ್ತೀರ್ಣ 0.20 ಗುಂಟೆ ಎಂದರೆ ಸರಿ. ಸದರಿ ವಿಸ್ತೀರ್ಣದ ಪೈಕಿ ಒಂದು ಭಾಗವನ್ನು ಮಾತ್ರ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿ. ನಿಡಿ–7 ಕ್ರಯ ಪತ್ರದಲ್ಲಿ ವಿಸ್ತೀರ್ಣವನ್ನು ಗಜಗಳಲ್ಲಿ ನಮೂದು ಮಾಡಿರುವ ಕಾರಣ ನನ್ನ ತಂದೆಯವರು ಸದರಿ ಸ್ವತ್ತನ್ನು ಅಳತೆ ಮಾಡಿ ಸ್ವಾಧೀನವನ್ನು ಪಡೆದುಕೊಳ್ಳುತ್ತೇನೆ ಎಂದು ಹೇಳಿ ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ವತ್ತನ್ನು ಅಳತೆ ಮಾಡಲು ಗ್ರಾಮ ಪಂಚಾಯ್ತಿ ಅಧಿಕಾರಿಗಳು ಬಂದಿದ್ದರು. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಸರ್ಕಾರಿ ನೌಕರ ಎಂದರೆ ಸರಿ. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಅಳತೆಗೆ ಬರುವ ಪೂರ್ವದಲ್ಲಿ ನನ್ನ ತಂದೆ ಮತ್ತು ವಾದಿಯವರಿಗೆ ನೋಟಿಸ್ ನೀಡಿದ್ದರೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಯಾವುದೇ ಪಂಚಾಯ್ತಿ ಅಭೀವೃದ್ಧಿ ಅಧಿಕಾರ ಸ್ವತ್ತನ್ನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–7 ಕ್ರಯಪತ್ರ ಬರೆದುಕೊಟ್ಟ 3 ತಿಂಗಳ ನಂತರ ಹನುಮಶೆಟ್ಟಿ ರವರು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರವಾದ ಸುಮಾರು ಒಂದು ವರ್ಷದ ಒಳಗೆ ಅಂದರೆ ದಿ.05–04–1974 ರಂದು ನನ್ನ ತಂದೆಯವರು ವಾದಿಯವರ ಹತ್ತಿರ ಹೋಗಿ ಸ್ವತ್ತನ್ನು ಅಳತೆ ಮಾಡಿಸಿ ಸ್ವಾಧೀನವನ್ನು ಪಡೆದುಕೊಳ್ಳುತ್ತೇನೆ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ

ಸಮಯ ವಾದಿ ರವರು ಸ್ವತ್ತನ್ನು ಅಳತೆ ಮಾಡಿ ಸ್ವಾಧೀನವನ್ನು ವಹಿಸಿಕೊಡುವುದಿಲ್ಲ ಎಂದು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ದಿ.05-04-1974 ರಿಂದಲೂ ಸಹ ವಾದಿಯವರೇ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನದಿಂದಲೂ ಸಹ ನಾವೇ ಸ್ವಾಧೀನದಲ್ಲಿ ಇದ್ದು ಅಲ್ಲಿ ಕ್ಷೌರಿಕ ಅಂಗಡಿಯನ್ನು ನಡೆಸುತ್ತಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಕ್ರಯದ ಲಾಗಾಯ್ತಿನಿಂದಲೂ ಸಹ ದಾವಾ ಸರ್ವೇ ನಂಬರಿನ ಕಂದಾಯ ದಾಖಲಾತಿಗಳು ವಾದಿಯವರ ತಂದೆಯವರ ಹೆಸರಿನಲ್ಲಿ ಇದ್ದು, ಅವರ ಮರಣಾ ನಂತರ ವಾದಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ಅನಕ್ಷರಸ್ಥರಾದ ಕಾರಣ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ಹೊರತುಪಡಿಸಿ ನಮಗೆ ಊರಿನಲ್ಲಿ ಜಮೀನು ಮತ್ತು ಬೇರೆ ಸ್ವತ್ತುಗಳು ಇರುತ್ತವೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ನಿಮ್ಮ ತಂದೆಯವರು ತನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಕೆಲವು ಸ್ವತ್ತುಗಳ ನನ್ನ ತಂದೆಯವರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು, ಇನ್ನೂ ಕೆಲವು ಸ್ವತ್ತುಗಳು ಬದಲಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ದಾವಾ ಷೆಡ್ಯೂಲ್ ಸ್ವತ್ತಿಗಾಗಲಿ ಅಥವಾ ಬೇರೆ ಯಾವುದೇ ಸ್ವತ್ತಿಗಾಗಲಿ

ಕಂದಾಯ ಪಾವತಿ ಮಾಡಿರುವುದಿಲ್ಲ. ನಾವು ನಮ್ಮ ಹೆಸರಿನಲ್ಲಿ ಇರುವ ಬೇರೆ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿ ಮಾಡಿಕೊಂಡು ಬಂದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಗ್ರಾಮವು ದಾವಾ ಷೆಡ್ಯೂಲ್ ಸರ್ವೇ ನಂಬರ್ ಸ್ವತ್ತಿನ ವರೆವಿಗೂ ವಿಸ್ತರಣೆಗೊಂಡಿರುತ್ತದೆ ಎಂದರೆ ಸರಿ. ಈ ದಾವಾ ಷೆಡ್ಯೂಲ್ ಸ್ವತ್ತಿನ ಮೌಲ್ಯವು ಹೆಚ್ಚಾಗಿರುತ್ತದೆ ಎಂದರೆ ಸರಿ. ವಾದಿಯವರು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುವ ವಿಚಾರ ಗೊತ್ತಿದ್ದರೂ ಸಹ ಈಗ ಜಮೀನಿನ ಮೌಲ್ಯ ಹೆಚ್ಚಾಗಿರುವುದರಿಂದ ನಾವೇ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ದಿ.28-10-2020 ರಂದು ನಾನು ಮತ್ತು ನನ್ನ ತಂದೆಯವರು ದಾವಾ ಷೆಡ್ಯೂಲ್ ಸ್ವತ್ತಿನ ಬಳಿ ಹೋಗಿ ವಾದಿಯವರ ಸ್ವಾಧೀನಕ್ಕೆ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆಗ ವಾದಿಯವರು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಷೆಡ್ಯೂಲ್ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಳ್ಳಲು ನನ್ನ ತಂದೆಯವರು ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ

ಸಲ್ಲಿಸಿರುವ ವಿಚಾರ ನನಗೆ ಗೊತ್ತು. ಸದರಿ ಮೇಲ್ಮನವಿಯಲ್ಲಿ ವಾದಿಯವರು ಹನುಮಶೆಟ್ಟಿ ರವರ ದತ್ತು ಮಗ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮೇಲ್ಮನವಿಯೂ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿಯೂ ಸಹ ನನ್ನ ತಂದೆಯವರು ಶ್ರೀಕಂಠಶೆಟ್ಟಿ ರವರು ಹನುಮಶೆಟ್ಟಿ ರವರ ದತ್ತು ಮಗ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರು ಹನುಮಶೆಟ್ಟಿ ರವರ ದತ್ತು ಮಗ ಎಂಬ ವಿಚಾರ ಗೊತ್ತಿದ್ದರೂ ಸಹ ದತ್ತು ಮಗ ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿ ಸಹ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ.

5.ನಿಪಿ-1 ರಿಂದ 4 ರಲ್ಲಿ ಕಾಣುತ್ತಿರುವ ಹೆಂಚಿನ ಕಟ್ಟಡವು ನಮ್ಮದಾಗಿದ್ದು ಅದನ್ನು ಶೇವಿಂಗ್‌ಶಾಪ್ ನಡೆಸಲು ಬಾಡಿಗೆಗೆ ನೀಡಿರುತ್ತೇವೆ. ನಿಪಿ-1 ರಿಂದ 4 ರಲ್ಲಿ ಕಾಣುತ್ತಿರುವ ಹೆಂಚಿನ ಕಟ್ಟಡವನ್ನು ವಾದಿಯವರೇ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಟ್ಟಡದಲ್ಲಿ ವಾದಿಯವರ ವ್ಯವಸಾಯಕ್ಕೆ ಬೇಕಾದ ವಸ್ತುಗಳನ್ನು ಇಟ್ಟುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-1 ರಿಂದ 5 ರವರೆಗಿನ

ಪೋಟೋಗಳಲ್ಲಿ ಕಾಣುತ್ತಿರುವ ರಸ್ತೆಯೂ ಸರ್ಕಾರಿ ರಸ್ತೆ ಎಂದರೆ ಸರಿ. ನಿಪಿ-1 ರಿಂದ 5 ರಲ್ಲಿ ಕಾಣುತ್ತಿರುವ ವ್ಯಕ್ತಿ ನನ್ನ ತಂದೆಯವರಾಗಿರುತ್ತಾರೆ. ನನ್ನ ತಂದೆಯವರು ನಿಂತಿರುವ ಹಿಂಭಾಗದಲ್ಲಿ ಇರುವ ಸ್ವತ್ತೇ ದಾವಾ ಷೆಡ್ಯೂಲ್ ಸ್ವತ್ತು ಎಂದರೆ ಸರಿ. ನನ್ನ ತಂದೆಯವರು ದಾವಾ ಷೆಡ್ಯೂಲ್ ಸ್ವತ್ತಿಗೆ ಹೋಗಲು ವಾದಿಯವರು ಬಿಡದೇ ಇರುವ ಕಾರಣ ನನ್ನ ತಂದೆಯವರು ರಸ್ತೆಯಲ್ಲಿ ನಿಂತು ನಿಪಿ-1 ರಿಂದ 5 ರವರೆಗಿನ ಪೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**